ಓ ಎಸ್ ನಂ.70/2023

ಡಿ.ಡಬ್ಲ್ಯೂ-2 ಸೈಫನಸಾಬ ತಂದೆ ಗಾಲಿಬಸಾಬ

**(ಇಂದು ದಿನಾಂಕಃ 29-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

**<u>ಪಾಟೀ ಸವಾಲು:</u> ಎಸ್ ಜಿ ಹೆಚ್ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯಲ್ಲಿ ಇಸಾರ ಪಾವತಿಯ ಬಗ್ಗೆ ಬರೆಯಲಾಗಿರುತ್ತದೆ. ಮೌಲಾಸಾಬ ಮತ್ತು ಮೀರಜ್ ಜಾಗೀರದಾರರವರ ಮದ್ಯ ಇಸಾರ ಪಾವತಿ ಆಗಿರುತ್ತದೆ. ಅದು ದಿನಾಂಕ 11-06-2004 ರಂದು ಆಗಿರುತ್ತದೆ. ಸದರಿ ಇಸಾರ ಪಾವತಿ ದಾಖಲೆಗೆ ನಾನು, ಮೀರಜ್, ಗುರಣ್ಣ ಮತ್ತು ಜಾಂಗೀರ ಸಹಿ ಮಾಡಿರುತ್ತೇವೆ. ೨೦ ಸಾವಿರ ರೂಪಾಯಿ ಮುಂಗಡ ಹಣ ನೀಡಿರುವುದಾಗಿ ಮತ್ತು ಉಳಿದ ೧೬ ಸಾವಿರ ರೂಪಾಯಿಯನ್ನು ನೋಂದಣಿ ಮಾಡುವ ಸಮಯದಲ್ಲಿ ಕೊಡುವ ಕುರಿತು ಸದರಿ ದಾಖಲೆಯಲ್ಲಿ ಬರೆಯಲಾಗಿರುತ್ತದೆ. ನಾನು ಇಸಾರ ಪಾವತಿಯಲ್ಲಿಮಾತ್ರ ಸಹಿ ಮಾಡಿರುತ್ತೇನೆ. ಸದರಿ ಇಸಾರ ಪಾವತಿ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ನಿಡಿ-೨ ಮತ್ತು ೩ ಸಹಿಗಳು ಇರುವ ಇಸಾರ ಪಾವತಿ ದಾಖಲೆಯಾಗಿರುತ್ತದೆ. ನಾನು ಹೇಳಿದಂತೆ ಯಾವುದೇ ಇಸಾರ ಪಾವತಿ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇಸಾರ ಪಾವತಿ ದಾಖಲೆ ರೂ.೧೦೦/- ಸ್ಟ್ಯಾಂಪಿನ ಮೇಲೆ ಇರಬಹುದು. ಅದು ಟಿಕಟ್ ಇರುವ ದಾಖಲೆ ಇತ್ತೋ ಅಥವಾ ಸ್ಟ್ಯಾಂಪಿನ ದಾಖಲೆ ಇತ್ತೋ ಎಂದು ನನಗೆ ಹೇಳಲು ಈಗ ಗೊತ್ತಿಲ್ಲ.

೨. ನನಗೆ ಈಗ ತೋರಿಸಿದ ದಾಖಲೆಯಲ್ಲಿ ರೂ.೧೦೦/- ಸ್ಟಾಂಪ್ ಇರುವ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಅದು ನನಗೆ ಈಗ ಹೇಳಲು ನೆನಪಿಲ್ಲ ಎನ್ನುತ್ತಾರೆ. ನಿವೇಶನ ನಂಬರ ಸದರಿ ದಾಖಲೆಯಲ್ಲಿ ಬರೆದಿರುತ್ತಾರೆ, ಆದರೆ ಅದು ಈಗ ನನಗೆ ಹೇಳಲು ನೆನಪಿಲ್ಲ. ನಿಡಿ-೨ ಮತ್ತು ೩ ಸಹಿಗಳು ಇರುವ ದಾಖಲೆಯಲ್ಲಿ ನಿವೇಶನ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ. ನಾನು

ಹೇಳಿದಂತೆ ನಿವೇಶನ ಸಂಖ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನೋಂದಣಿ ಮಾಡಿದ ದಾಖಲೆ ನೋಡಿದರೆ ಅದು ಗೊತ್ತಾಗುತ್ತದೆ ಎನ್ನುತ್ತಾರೆ. ಮುಂಗಡ ಹಣ ನೀಡಿದ ಬಗ್ಗೆ ರಶೀದಿ ಪಡೆದಿಲ್ಲ, ವಿಶ್ವಾಸದ ಮೇಲೆ ಹಣ ನೀಡಲಾಗಿರುತ್ತದೆ. ನಾನು ಹೇಳಿದಂತೆ ೨೦೦೪ ರಲ್ಲಿ ಯಾವುದೇ ಕರಾರುಪತ್ರ ದಾಖಲೆ ಆಗಿರುವುದಿಲ್ಲ ಅದನ್ನು ಇತ್ತೀಚೆಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆಗುವಾಗ ಕರಾರುಪತ್ರವನ್ನೂ ಕೂಡಾ ನೋಂದಣಾಧಿಕಾರಿಗಳ ಹತ್ತಿರ ತೆಗೆದುಕೊಂಡು ಹೋಗಿದ್ದೇವು. ಉಪನೋಂದಣಾಧಿಕಾರಿಗಳು ಸದರಿ ಕರಾರುಪತ್ರವನ್ನು ನೋಡಿರುತ್ತಾರೆ. ಅದರ ಮೇಲೆ ಅವರು ಸಹಿ ಮಾಡಿದ ಬಗ್ಗೆ ನಾನು ನೋಡಿಲ್ಲ.

೩. ನಾನು ಖರೀದಿ ಪತ್ರ ಮಾಡುವಾಗ ಇರಲಿಲ್ಲ. ಆದರೆ ಕರಾರು ಪತ್ರ ಮಾಡುವಾಗ ಇದ್ದೆ. ನಮ್ಮ ಕಾಕ ಹೇಳಿದ್ದರಿಂದ ಕರಾರುಪತ್ರವನ್ನು ಉಪನೋಂದಣಾಧಿಕಾರಿಗಳಿಗೆ ತೋರಿಸಿದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ೨೦೦೬ ರಲ್ಲಿ ಖರೀದಿ ಪತ್ರ ಆಗಿರುತ್ತದೆ. ಖರೀದಿ ಪತ್ರದಲ್ಲಿ ಮುಂಗಡ ಹಣ ನೀಡಿದ ಬಗ್ಗೆ ಬರೆದಿರಲಿಕ್ಕಿಲ್ಲ. ಖರೀದಿ ಪತ್ರದಲ್ಲಿ ಮುಂಗಡ ಹಣ ನೀಡಿದ ಬಗ್ಗೆ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಪತ್ರವು ಔರಂಗಜೇಬನ ಹೆಸರಿನಲ್ಲಿ ಆಗಿರುತ್ತದೆ. ನಮ್ಮ ಕಾಕ ಹಿರಿಯ ಮಗನಾದ ಔರಂಗಜೇಬನ ಹೆಸರಿನಲ್ಲಿ ಖರೀದಿ ಪತ್ರ ಮಾಡಿರುತ್ತೇನೆ ಎಂದು ನನಗೆ ಹೇಳಿರುತ್ತಾನೆ. ದಾವಾ ಆಸ್ತಿಯಲ್ಲಿ ಜಾಂಗೀರ ಮತ್ತು ಔರಂಗಜೇಬ ಇಬ್ಬರು ಸ್ವಾಧೀನದಲ್ಲಿ ಇರುತ್ತಾರೆ. ಜಾಂಗೀರ ಬಾಡಿಗೆ ಮನೆಯಲ್ಲಿ ಇರುತ್ತಾನೆ, ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ಮಾತ್ರ ನನ್ನ ಸಹಿ ಇರುತ್ತದೆ, ಬೇರೆ ದಾಖಲೆಗಳಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.